ಶ್ರೀ ಎಂ. ಚಿಕ್ಕಲಿಂಗಯ್ಯ.—ಹಾಗಾದರೆ ತಾವು ಬಡ್ಜೆಟ್ ನೋಡಿಲ್ಲವೆಂದು ಅರ್ಥವಾಗುತ್ತದೆ, ಅಲ್ಲವೆ?

ಶ್ರೀ ಎ. ಜಿ. ರಾಮಚಂದ್ರರಾವ್.— ಅದು ನಿಮ್ಮ ಅಭಿಪ್ರಾಯ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಶಿಫಾರಸು ಮಾಡಿರುವುದರಲ್ಲಿ ಇಂಥ sourceನಿಂದ ಇಷ್ಟು ಕೊಡಬೇಕೆಂದೂ ತೋರಿಸಿದ್ದಾರಲ್ಲವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಹಾಗಾದರೆ ಕೊಡದೇ ಇರುವುದಕ್ಕೆ ಕಾರಣವೇನು?

Sri A. G. RAMACHANDRA RAO.—It means a recurring expenditure. It is not a mere adjustment for this year. It will have to go on for the future also. That is why the importance of it is being examined.

ಶ್ರೀ ಎಂ. ಚಿಕ್ಕಲಿಂಗಯ್ಯ.—ಡೈರೆಕ್ಟರವರು ಶಿಫಾರಸು ಮಾಡುವಾಗ ಇಂಥ sourcesಗಳಿಂದ ಇದನ್ನು ಕೊಡಬಹುದೆಂದು ಸೂಚಿಸಿಲ್ಲವೆ?

Sri A. G. RAMACHANDRA RAO—Sir, the Director will have suggested only some adjustment for the current year. But this is a matter of recurring expenditure which has to be examined.

ಶ್ರೀ ಎಂ. ಚಿಕ್ಕಲಿಂಗಯ್ಯ.—ನಾನು ಕೇಳಿದುದನ್ನು ಅರ್ಥ ಮಾಡಿಕೊಂಡಿಲ್ಲ. ನಿಬಂಧನೆಗಳ ಪ್ರಕಾರ source ತೋರಿಸಬೇಕು. ಆ ರೀತಿ ಮಾಡಿದ್ದರೂ ಏಕೆ ಮಂಜೂರು ಮಾಡಲಿಲ್ಲ?

Sri A. G. RAMACHANDRA RAO.—Sir, I have answered the question. I request the Hon'ble Member to understand the answer.

Sri M. CHIKKALINGIAH.—I have understood the answer, Sir. From the last three years, why are the Government higgling to give the grants?

Sri A. G. RAMACHANDRA RAO.—Because of the difficulty of the finances.

ಶ್ರೀ ಬಿ. ರಾಚಯ್ಯ.—ಕಳೆದ ಮೂರು ವರ್ಷಗಳಿಂದ ವಿಶ್ವವಿದ್ಯಾನಿಲಯದಲ್ಲಿ ಇವರಿಗಾಗಿ ಕೊಡತಕ್ಕ ವೇತನಗಳು ಲ್ಯಾಪ್ಸ್ ಆಗುತ್ತಿಲ್ಲವೇ?

Sri A. G. RAMACHANDRA RAO.—I think so, Sir. I believe he is correct.

ಶ್ರೀ ಬಿ. ರಾಚಯ್ಯ.—ಆ ಹಣವನ್ನು ಬಡ್ಜೆಟ್‌ನಲ್ಲಿ ಒದಗಿಸುವಾಗ, ಅದನ್ನು ಹೈಸ್ಕೂಲು, ಮಿಡ್ಲ್‌ಸ್ಕೂಲು ವಿದ್ಯಾರ್ಥಿಗಳಿಗೆ ಒದಗಿಸಬೇಕೆಂದು ಸದಸ್ಯರು ನಿವೇದಿಸಿಕೊಳ್ಳಲಿಲ್ಲವೆ?

Sri A. G. RAMACHANDRA RAO.—The lapses are in respect of University grant. This expenditure comes under the Education Department. The University has declined to have it cancelled or otherwise transferred.

ಶ್ರೀ ಬಿ. ರಾಚಯ್ಯ.—ಅಲ್ಲಿ ಮೊಬಲಗು ಕೊಡಬೇಡಿ, ಇಲ್ಲಿ ಕೊಡಿ ಎಂದು ಹೇಳಲಿಲ್ಲವೆ?

Sri A. G. RAMACHANDRA RAO.—I do not remember, Sir.

Depressed Class Aided Hostel for Nerale.

Q.—474. **Sri M. MADIAH.**—(Nanjangud—Scheduled Castes).—

Will the Government be pleased to state:—

(*a*) whether it is not a fact that the Director of Public Instruction and the Government are requested to start a Depressed Class Aided Hostel at Nerale, Nanjangud Taluk;

(*b*) the action taken to start the educational institution at an early date?

A—**Sri A. G. RAMACHANDRA RAO** (Minister for Law and Education).—

(*a*) No.

(*b*) Does not arise in view of reply to (*a*).

Sri M. MADIAH.—Is it a fact that a representation is given to the Director of Public Instruction on the 8th August 1955 requesting him to send a proposal to Government to start an aided hostel in the place?

***Sri A. G. RAMACHANDRA RAO.**—I will enquire.

Sri M. MADIAH.—Is it a fact that the same has been forwarded to the Deputy Director of Public Instruction?

Sri A. G. RAMACHANDRA RAO.—I will enquire.

Sri M. MADIAH.—But why is the answer given as 'no'?

Mr. SPEAKER.—The Minister has answered that he will make an enquiry.

Sri M MADIAH.—Will the Government kindly see that the proposals are called for for the starting of an Aided Hostel at Nerale?

Sri A. G. RAMACHANDRA RAO.—We will consider.

Primary Schools in Arsikere Taluk (Buildings).

Q.—479. **Sri K. PANCHAKSHARIAH** (Arsikere).—

Will the Government be pleased to state:—

(*a*) the number of Primary Schools in Arsikere Taluk;

(*b*) of them, the number for which there are no buildings;

(*c*) the number of school buildings for which the villagers have deposited money;

(*d*) the number out of the above for which buildings have been constructed?

A.—Sri A. G. RAMACHANDRA RAO (Minister for Law and Education).—

(*a*) 169.

(*b*) 14.

(*c*) 5.

(*d*) Action has been taken to call for plans and estimates for putting up Government buildings in view of urgency and priority at four places.

ಶ್ರೀ ಕೆ. ಪಂಚಾಕ್ಷರಯ್ಯ – ಅರಸೀಕೆರೆ ತಾಲ್ಲೂಕಿನಲ್ಲಿ ಪ್ರೈಮರಿ ಸ್ಕೂಲುಗಳಿಲ್ಲದೇಯಿರುವ ಗ್ರಾಮುಗಳೆಷ್ಟು ?

ಅಧ್ಯಕ್ಷರು.—ಆ ಪ್ರಶ್ನೆ ಇಲ್ಲಿ ಹುಟ್ಟುವುದಿಲ್ಲ, ಇದು ಕಟ್ಟಡಗಳಿಗೆ ಸಂಬಂಧಪಟ್ಟದ್ದು.

ಶ್ರೀ ಕೆ. ಪಂಚಾಕ್ಷರಯ್ಯ.—ಐದು ಸ್ಕೂಲು ಕಟ್ಟಡಗಳಿಗೆ ಹಣವನ್ನು ಡಿಪಾಜಿಟ್ ಮಾಡಿದ್ದಾರೆಂದು ತಿಳಿಸಿದ್ದೀರಿ, ಅವು ಯಾವುವು ?

*ಶ್ರೀ ಎ. ಜಿ. ರಾಮಚಂದ್ರರಾವ್.—ಈ ಐದು ಸ್ಕೂಲುಗಳ ಪೈಕಿ, ನಾಲ್ಕು ಸ್ಕೂಲುಗಳಿಗೆ ಕಟ್ಟಡಗಳನ್ನೊದಗಿಸಲು ಪ್ರಯತ್ನ ಮಾಡುತ್ತೇವೆ. ಅವು ಯಾವುವೆಂಬುದು ಬೇಕಾದರೆ, ನೋಡಿ ಹೇಳುತ್ತೇನೆ.

ಶ್ರೀ ಕೆ. ಪಂಚಾಕ್ಷರಯ್ಯ.—ಈ ಪೈಕಿ ಕಣ್ಕಟ್ಟೆ ಗ್ರಾಮದವರು ಹಣವನ್ನು ಡಿಪಾಜಿಟ್ ಮಾಡಿದ್ದಾರಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಯಾವಯಾವ ಗ್ರಾಮಗಳವರು ಡಿಪಾಜಿಟ್ ಮಾಡಿದ್ದಾರೋ ಗೊತ್ತಿಲ್ಲ. ನೋಡಿ ಹೇಳುತ್ತೇನೆ.

ಶ್ರೀ ಕೆ. ಪಂಚಾಕ್ಷರಯ್ಯ.—ಈ ಗ್ರಾಮದವರು ಹಣ ಕೊಟ್ಟು ಎಷ್ಟು ವರ್ಷವಾಯಿತು ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೆಲವು ವರ್ಷಗಳಾಗಿರಬೇಕು.

ಶ್ರೀ ಕೆ. ಪಂಚಾಕ್ಷರಯ್ಯ.—ಎಷ್ಟು ಹಣ ಕೊಟ್ಟಿದ್ದಾರೆ, ಎಷ್ಟು ಕೊಟ್ಟಿಲ್ಲ ಎಂಬುದನ್ನು ಹೇಳುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಈಗ ವಿವರಗಳು ನನ್ನಲ್ಲಿಲ್ಲ.

ಶ್ರೀ ಕೆ. ಪಂಚಾಕ್ಷರಯ್ಯ.—ಆಗಲೇ 8 ವರ್ಷವಾಗಿದೆ. 8 ವರ್ಷವಾದರೂ ಇನ್ನೂ ಸ್ಕೂಲು ಕಟ್ಟಡ ಕಟ್ಟುವುದಕ್ಕೆ ಅವಕಾಶವಾಗಿಲ್ಲವೆಂದು ಹೇಳುತ್ತೀರಲ್ಲಾ!

Sri A. G. RAMACHANDRA RAO.—Probably that also is included in one of the buildings sanctioned.

New Primary Schools in Nelamangala Taluk.

Q.—658. Sri D. M. GOVINDARAJU (Nelamangala).—

Will the Government be pleased to state :—

(*a*) the number of applications received since the last five years for starting new primary schools in Nelamangala Taluk ;

(*b*) the names of villages in the taluk for which schools have been sanctioned till now ?

A.—Sri A. G. RAMACHANDRA RAO (Minister for Law and Education).—

(*a*) Information is not readily available.

(*b*) 1 Thalekere.
2 Thotanahalli.
3 Yelekyathanahalli.
4 Vengalakempohalli.
5 Thyamagondlu.
6 Kempohalli.
7 Pillahalli.
8 Kalalaghatta.
9 Lakkanahalli.
10 Kodihalli.
11 Jodihanchipura.
12 Kanegowdanahalli.
13 Channathimmayyanapalya.
14 Jodinarayanapura.
15 Minapura.
16 Kammasandra.
17 Devaganahalli.
18 Yedehalli.

ಶ್ರೀ ಡಿ. ಎಂ. ಗೋವಿಂದರಾಜು.—ನನ್ನ (a) ಪ್ರಶ್ನೆಗೆ ಉತ್ತರವಾಗಿ ವಿವರಗಳು ದೊರೆಯಲಿಲ್ಲವೆಂದು ಹೇಳಿದ್ದಾರೆ. 5 ವರ್ಷಗಳ ಲೆಕ್ಕ ಸಿಕ್ಕಬೇಕಾದರೆ ಇಷ್ಟು ಕಷ್ಟವೇ ?

*ಶ್ರೀ ಎ. ಜಿ. ರಾಮಚಂದ್ರರಾವ್.—ಕಷ್ಟವಿಲ್ಲ ; ಸ್ವಲ್ಪ ತಡವಾಗುತ್ತದೆ.

ಶ್ರೀ ಡಿ. ಎಂ. ಗೋವಿಂದರಾಜು.—ಹಾಗಾದರೆ ವಿವರಗಳು ದೊರತಮೇಲೆಯೇ ನಾನು ಪ್ರಶ್ನೆ ಕೇಳುತ್ತೇನೆ.

ಶ್ರೀ ಎ. ಜಿ ರಾಮಚಂದ್ರರಾವ್.—ಹಾಗಲ್ಲ ; ವಿವರಗಳನ್ನು ಕಳುಹಿಸಿ ಕೊಡುತ್ತೇನೆ. ಆಮೇಲೆ ಬೇಕಾದರೆ ಬೇರೆ ಪ್ರಶ್ನೆ ಹಾಕಿ.

Power supply to villages of Chamarajanagar Taluk for lift irrigation.

Q.—234. Sri U. M. MADAPPA (Chamarajanagar).—

Will the Government be pleased to state :—

(*a*) the names of villages of Chamarajanagar Taluk the residents of which have requested for the supply of electric power for irrigation pumps ;

(*b*) the number of estimates that have been finalised in the Department ;

(*c*) the number of estimates prepared that are under consideration ;

(*d*) the number of estimates that are yet to be prepared ?

(*e*) the number of estimates that are to be sanctioned by them ?